# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

**ಸಿ.ಸಿ ನಂ.1224/2025**

**ಸಿ.ಡಬ್ಲ್ಯೂ: 32, ಪಿ.ಡಬ್ಲ್ಯೂ: 16**

| | | |
|---|---|---|
| **ಸಾಕ್ಷಿದಾರನ ಹೆಸರು** | : | **ಜಗದೀಶ ಚನ್ನಪ್ಪ ಹಂಚನಾಳ** |
| **ತಂದೆಯ ಹೆಸರು** | : | **ಚನ್ನಪ್ಪ ಹಂಚನಾಳ** |
| **ವಯಸ್ಸು** | : | 49 ವರ್ಷ |
| **ಉದ್ಯೋಗ** | : | **ಸಿ.ಪಿ.ಐ** ., ಮುರ್ಡೇಶ್ವರ ಪೋಲಿಸ್ ಠಾಣೆ |
| **ವಾಸ** | : | ಮುರ್ಡೇಶ್ವರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 11-08-2026**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ನವೆಂಬರ್ 2025 ರಿಂದ ಇಂದಿನವರೆಗೆ ವೃತ್ತ ನಿರೀಕ್ಷಕನಾಗಿ ಮುರ್ಡೇಶ್ವರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ನಾನು ದಿನಾಂಕ 10/02/2026 ರಂದು ಆರೋಪಿತರು ಬಳಸಿರುವ ಮೂರು ಮೊಬೈಲಿನ CAF ಮಾಹಿತಿಯ ಬಗ್ಗೆ 63(4)(ಸಿ) ಬಿ.ಎಸ.ಇ ರಡಿಯಲ್ಲಿ ಪ್ರಮಾಣ ಪತ್ರವನ್ನು ಮತ್ತು ಮಾವಳ್ಳಿ ಗ್ರಾಮ ಪಂಚಾಯಿತಿಯಿಂದ ಘಟನಾ ಸ್ಥಳದ ದಾಖಲೆಯನ್ನು ಪಡೆದುಕೊಂಡು ದಿನಾಂಕ 17/02/2026 ರಂದು ಹೆಚ್ಚುವರಿ ದೊಷಾರೋಪಣಾ ಪಟ್ಟಿಯನ್ನು ನ್ಯಾಯಾಲಯುಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದ್ರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಸದ್ರಿ ಪ್ರಮಾಣ ಪತ್ರವನ್ನು ನಿಪಿ-55 ಎಂದು ಅದನ್ನು ಸ್ವೀಕರಿಸಿದ ಬಗ್ಗೆ ಸಾಕ್ಷಿಯ ಸಹಿಯನ್ನು ನಿಪಿ-55(ಎ) ಹಾಗೂ ಮಾವಳ್ಳಿ ಗ್ರಾಮ ಪಂಚಾಯಿತಿಯಿಂದ ನೀಡಿರುವ ಮಾಹಿತಿಯನ್ನು ನಿಪಿ-56 ಎಂದು ಅದನ್ನು ಸ್ವೀಕರಿಸಿದ ಬಗ್ಗೆ ಸಾಕ್ಷಿಯ ಸಹಿಯನ್ನು ನಿಪಿ- 56(ಎ)

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

ಈ ಪ್ರಕರಣದ ಸಂಪಜಾರ್ಣ ತನಿಖೆಯನ್ನು ಚಾಸಾ-29ರವರು ಕೈಗೊಂಡಿರಿರುತ್ತಾರೆ. ಅವರು ದಿನಾಂಕ 09/06/2025 ರಂದು ದೊಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರಿರುತ್ತಾರೆ. ನಿಪಿ-55 ರಂತೆ ವರಿದಿಯು ದಿನಾಂಕ 20/08/2025 ರಂದು

ತಯಾರಾಗಿದೆ ಎಂದರೆ ಸರಿ. ದೊಷರೋಪಣಾ ಪಟಪ್ಟಿಯನ್ನು ಸಲ್ಲಿಸಿದ ಎರಡು ತಿಂಗಳ ನಂತರ ನಿಪಿ-55 ದಾಖಲೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ತಯಾರಿಸಿದ ನಿಪಿ-55 ದಾಖಲೆಯನ್ನು ದಿನಾಂಕ 10/02/2026 ರಂದು ಸ್ವೀಕರಿಸಿದ್ದೆನೆ ಎಂದು ನುಡಿಯುತ್ತಾರೆ. ಮಾವಳ್ಳಿ ಗ್ರಾಮ ಪಂಚಾಯಿತಿ ನಮ್ಮ ಠಾಣೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ನಾನು ದಿನಾಂಕ 24/01/2026 ರಂದು ನಾನು ದ್ವಿತಿಯ ಕೋರಿಕೆ ಪತ್ರವನ್ನು ಮಾವಳ್ಳಿ ಗ್ರಾಮ ಪಂಚಾಯಿತಿಗೆ ನೀಡಿದ್ದು, ಪ್ರಥಮ ಕೋರಿಕೆ ಪತ್ರವನ್ನು ದಿನಾಂಕ 13/05/2025 ರಂದು ನೀಡಲಾಗಿದೆ. ಪ್ರಥಮ ಕೋರಿಕೆ ಪತ್ರದ ಮೇರೆಗೆ ಮಾಹಿತಿಯನ್ನು ನೀಡದ ಕಾರಣ ದ್ವಿತಿಯ ಕೋರಿಕೆ ಪತ್ರವನ್ನು ನೀಡಿರುತ್ತೇನೆ. ನಿಪಿ-55 ಮತ್ತು 56 ರಂತೆ ನಾನು ದಾಖಲೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಆಧಾರ ಇಲ್ಲದೆ ಇದ್ದರೂ ಕೂಡಾ ಹೆಚ್ಚುವರಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ ಭಟ್ಕಳ.**